3) ಅವಲಂಬಿತರಿಗೆ ಗ್ಯಾಸ್ ಮತ್ತು ಪೆಟ್ರೋಲ್ ಏಜೆನ್ಸಿಗಳಿಗೆ ಏಳು ಅರ್ಜಿಗಳು ಬಂದಿದ್ದು, ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಶಿಫಾರಸ್ಸು ಮಾಡಲಾಗಿದೆ.

ಕಾರಾಗೃಹಗಳ ಸುಧಾರಣೆ ಕುರಿತು

2868 (3659) ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿರುವ ಪೋಲೀಸ್ ಕಾರಾಗೃಹಗಳ ನಿರ್ವಹಣೆ ಸುಧಾರಣೆಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಬೆಂಗಳೂರು ಸೆಂಟ್ರಲ್ ಜೈಲನ್ನು ಸ್ಥಳಾಂತರಿಸುವ ಯೋಜನೆ ಸರ್ಕಾರಕ್ಕ ಇದೆಯೇ?

ಇ) ಇದ್ದಲ್ಲಿ ಯಾವಾಗ ಸ್ಥಳಾಂತರಿಸಲಾಗುವುದು ಹಾಗೂ ಎಲ್ಲಿಗೆ ಸ್ಥಳಾಂತರಿಸಲಾಗುವುದು.

ಈ) ಜೈಲಿನಿಂದ ಅಪರಾಧಿಗಳು ಪಾರಾಗಿ ಆಗುವ ಪ್ರಕರಣಗಳು ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಸ್ಥಳಾಂತರವಾದ ಪ್ರದೇಶವನ್ನು ಯಾವ ರೀತಿಯಲ್ಲಿ ಬಳಸುವ ಯೋಜನೆ ಹೊಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):-

ಅ) ರಾಜ್ಯದಲ್ಲಿ ಈ ಕೆಳಗಿನಂತೆ ಹೊಸದಾಗಿ ವಾರ್ಷಿಕ ಯೋಜನೆಗಳಡಿಯಲ್ಲಿ ಕಾರಾಗೃಹಗಳನ್ನು ನಿರ್ವಹಿಸಲಾಗುತ್ತಿದ್ದು ಅವುಗಳಲ್ಲಿ ತಾಲ್ಲೂಕು ಉಪ ಕಾರಾಗೃಹ ನಂಜನಗೂಡು, ಹಡಗಲಿ ಹಾಗೂ ನರಸಿಂಹ ರಾಜಪುರದಲ್ಲಿ ಕಾಮಗಾರಿ ಈ ಗಾಗಲೇ ಮುಗಿದಿದ್ದು ಸಧ್ಯದಲ್ಲಿಯೇ ಇಲಾಖೆ ವಶಕ್ಕೆ ಪಡೆದು ಜೈಲು ಪ್ರಾರಂಭಸಲಾಗುತ್ತಿದೆ. ಉಳಿದಂತೆ ಬೆಂಗಳೂರು, ಚಿಕ್ಕಮಗಳೂರು ಹಾಗೂ ಆಳಂದದಲ್ಲಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮೈಸೂರು ಜೈಲಿನಲ್ಲಿ ಹೊಸದಾಗಿ ಬಂದಿಗಳಿಗೆ ಬ್ಯಾರಕ್ಕೂಗಳನ್ನು ನಿರ್ಮಿಸಲಾಗುತ್ತಿದ್ದುಕಾಮಗಾರಿ ಪ್ರಗತಿಯಲ್ಲಿದೆ. ಕೈದಿಗಳ ಮನೋಪ್ರವೃತ್ತಿ ಮಾರ್ಪಡಿಸಲು ಈ ಕೆಳಕಂಡಂತೆ ಸುಧಾರಣಾ ಕ್ರಮಗಳನ್ನುಕೈಗೊಳ್ಳಲಾಗಿದೆ.

1) ವೃತ್ತಿ ಶಿಕ್ಷಣ ತರಬೇತಿ

2) ಮಜೂರಿ ಗಳಿಕೆ ಯೋಜನೆ

3) ಅಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಭೇತಿ

4) ಶಿಕ್ಷಣ ಮತ್ತು ವಾಚನಾಲಯ

5) ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆ

6) ಸಂದರ್ಶನ ಪದ್ಧತಿ

7) ಪೆರೋಲ್ ಮತ್ತು ಫರ್ಲೋ ರಜೆ

8) ಅವಧಿ ಪೂರ್ವ ಬಿಡುಗಡೆ

9) ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮ ವ್ಯವಸ್ಥೆ ಜೊತೆಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಹೌದು

ಇ) ಬೆಂಗಳೂರು ದಕ್ಷಿಣ ತಾಲ್ಲೂಕು ಪರಪ್ಪನ ಅಗ್ರಹಾರದಲ್ಲಿ ನಿರ್ಮಿಸಿರುವ ನೂತನ ಕೇಂದ್ರ ಕಾರಾಗೃಹಕ್ಕೆ ಪ್ರಸಕ್ತ ಸಾಲಿನ ಡಿಸೆಂಬರ್ ಕೊನೆಯವಾರದಲ್ಲಿ ಸ್ಥಳಾಂತರಿಸಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ.

ಈ) ಜೈಲಿನ ಸಿಬ್ಬಂದಿಯ ಅಜಾಗರೂಕತೆಯ ಲಾಭವನ್ನು ಪಡೆದು ಪರಾರಿಯಾಗುವ ಪ್ರಕರಣಗಳನ್ನು ತಪ್ಪಿಸಲು ಲೋಪವೆಸಗಿದ ಸಿಬ್ಬಂದಿಗಳ ವಿರುದ್ಧ ತೀವ್ರವಾದ ಶಿಸ್ತುಕ್ರಮ ತೆಗೆದುಕೊಳ್ಳಲಾಗಿದೆ.

ಅನೇಕ ಹೊಸ ಜೈಲುಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೂ ಕೆಲ ಜೈಲುಗಳನ್ನು ಉತ್ತಮಪಡಿಸುವ ಯೋಜನೆ ಸಹ ಇದೆ. ಸಿಬ್ಬಂದಿಯ ಕೊರತೆಯನ್ನು ನೀಗಿಸಲು ಖಾಲಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಉ) ಸ್ಥಳಾಂತರಿಸಿದ ನಂತರ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಡಿಸ್ಟಿಲರಿಗಳು

2869(3835) ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಹಾಗೂ ಉಡುಪಿ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಡಿಸ್ಟಿಲರಿಗಳ ವಿವರಗಳನ್ನು ನೀಡುವುದು (ಜಿಲ್ಲಾವಾರು ಮಾಹಿತಿ ಮತ್ತು ಪರವಾನಿಗೆ ಪಡೆದು ಕೊಂಡಿರುವ ಮಾಲೀಕರ ವಿಳಾಸ ಸಹಿತ ವಿವರ ನೀಡುವುದು).

ಆ) ಈ ಡಿಸ್ಟಿಲರಿಗಳಿಂದ 1999-2000 ಮತ್ತು 2000-2001 ರ ಸಾಲಿನಲ್ಲಿ ಸರ್ಕಾರ ನಿಗದಿಪಡಿಸಿದ ಪರವಾನಗಿ (ಉತ್ಪಾದನಾ ಹಾಗೂ ಮಾರಾಟ)ಗಳ ವಿವರಗಳನ್ನು ನೀಡುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಪೂರ್ಣ ವಿವರಗಳನ್ನೊಳಗೊಂಡ ತನಿಖೆಯನ್ನು ಅನುಬಂಧ ವನ್ನು ತೋರಿಸಿದೆ.

ಆ) ಡಿಸ್ಟಿಲರಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ಉತ್ಪಾದನಾ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಕರ್ನಾಟಕ ಅಬಕಾರಿ (ಮದ್ಯಸಾರ, ಬಿಯರ್, ವೈನ್ ಅಥವಾ ಮದ್ಯ ಪಾನಿಯಗಳ ಇಳುವರಿ ಉತ್ಪಾದನೆ ಮತ್ತು ನಷ್ಟದ ನಿಯಂತ್ರಣ) ನಿಯಮಗಳು 1998 ರಲ್ಲಿ ಉತ್ಪಾದನಾ ಸೂತ್ರಗಳನ್ನು ನಿಗದಿಪಡಿಸಲಾಗಿದೆ. ಮದ್ಯ ಮಾರಾಟದ ಪ್ರಮಾಣದ ಬಗ್ಗೆ ಸಹಾ ಸರ್ಕಾರವು ಯಾವುದೇ ಗುರಿಯನ್ನು ನಿಗದಿಪಡಿಸಿರುವುದಿಲ್ಲ.